ಜೀವ್ದನಗ್ಳ್ನ ಗೋಳ್ನ ನೋಡೋಕಾಗಲ್ಲ. ಅದುಕ್ಕೆ ಹೋದ್ವಾರ ಒಂದ್ಜೊತೆ ಎತ್ತು, ಎಮ್ಮೇನ ರಾಂಪುರದ ಸಂತೇಲಿ ವಿಲೆವಾರಿ ಮಾಡ್ಬಂದೆ. ನಾಳೆ ಎಲೆಕ್ಷನ್ ಬೇರೆ. ತಿಂಗ್ಳಿಂದ್ಲೂ ಇಡೀ ತಾಲ್ಲೂಕಿನ ಗಂಡುಸ್ರು ಅದ್ರಾಗೆ ಮುಳುಗಿ ತೇಲ್ತಾ ಅವ್ರೆ...' ತಾನೂ ವ್ಯಥೆಯನ್ನು ಹಂಚಿಕೊಂಡಿದ್ದ.

ಅಷ್ಟರಲ್ಲಿ ಅನುಸೂಯಮ್ಮ ಇಬ್ಬರಿಗೂ ಅರ್ಧರ್ಧ ಕಪ್ಪು ಕಾಫಿಯನ್ನು ತಂದುಕೊಟ್ಟಿದ್ದಳಲ್ಲದೆ, ಅವರಿಬ್ಬರ ಮಾತನ್ನು ಕೇಳಿಸಿಕೊಂಡಿದ್ದರಿಂದ ತನ್ನ ಮಾತನ್ನೂ ಸೇರಿಸಿದ್ದಳು. 'ನಮ್ಮೆಜ್ಮಾನ್ರು ರಾತ್ರಿ ಹೇಳ್ತಿದ್ರು ಇನ್ನೆಡ್ಮ್ಯಾರ್ ವಾರ್ದಲ್ಲಿ ಗೌರ್ಮೆಂಟೋರು ಮೋಡ ಬಿತ್ನೆ ಮಾಡಿಸ್ತಾರಂತೆ. ಅದುಕ್ಕಂತಾನೇ ಅಮೆರಿಕ ದೇಶದಿಂದ ಸ್ಪೆಶಲ್ ವಿಮಾನ ತರಿಸ್ತಾ ಇದಾರಂತೆ. ಈ ಎಲೆಕ್ಷನ್ನಲ್ಲಿ ಗೆದ್ರೆ ನಮ್ ತಾಲ್ಲೂಕ್ ಮ್ಯಾಲೂ ಮೋಡ ಬಿತ್ನೆ ಮಾಡೋದು ಗ್ಯಾರಂಟಿಯಂತೆ. ನಾಲ್ಕೊರ್ಷದಿಂದ್ಲೂವೆ ಕೆರೆ ಕುಂಟೆ ಬಾಯ್ತೆರ್ಕಂಡು ಕುಂತವೆ. ಒಂದು ಓಟಾಕಿ ನೋಡಾನ ಕಳ್ಕಂಬೋದೇನೈತೆ...' ಅನುಸೂಯಮ್ಮನೂ ಏಳನೆಯ ಕ್ಲಾಸು ಪಾಸು ಮಾಡಿದ್ದರಿಂದ ಒಂದಿಷ್ಟು ಜನರಲ್ ನಾಲೆಡ್ಜ್ ತಲೆಗೆ ತುಂಬಿಕೊಂಡಿದ್ದಳು. 'ಅಯ್ಯೋ ಹೋಗಮ್ಮಯ್ಯ ತಿರ್ಬೋಕಿ ನನ್ಮಕ್ಳ್ ಮಾತೇನು ಕಟ್ಕಂಬ್ತೀಯ. ಸ್ವಾತಂತ್ರ್ಯ ಬಂದಾಗ್ಲಿಂದ್ಲೂ ಅದ್ ಮಾಡ್ತೀವಿ, ಇದ್ ಮಾಡ್ತೀವಿ ಅಂತ ಬೊಗುಳ್ತಾನೆ ಬಂದ್ರು. ಹಳ್ಳಿಗೆಲ್ಲ ಸ್ಮಶಾನ ಆದೋದ್ವು. ಈ ಮೂರು ದಿನದಿಂದ್ಲೂ ಉಂಬ್ರ ಜಾಸ್ತಿ ಐತೆ. ಇಷ್ಟಾಗಿ ಮಳೆ ಬಂದ್ರೂ ಬರ್ಬೋದು. ಒಟ್ನಾಗೆ ಭಗವಂತ ಕಣ್ಣು ತೆರಿಬೇಕಷ್ಟೆ. ಬಿಸಿಲ್ಗೆ ಕಜ್ಜಿ ಗಾಳಿಗೆ ಬೆಂಕಿ ರವುಳ್ದಂಗೆ ರವುಳ್ತೈತೆ, ಯಾಸಟ್ಗೆ ಹುಷಾರಮ್ಮ...' ಎಂದು ತಿಮ್ಮಯ್ಯ ಮೇಷ್ಟ್ರು ತಮ್ಮ ಮನೆಯ ದಾರಿ ಹಿಡಿದರು.

ಎಲೆಕ್ಷನ್ ದಿನ ಬಂತು. ಬೆಳಿಗ್ಗೆ ಎಂಟು ಗಂಟೆಯಿಂದಲೂ ಜನ ಸ್ಕೂಲಿನ ಬಳಿ ಹೋಗಿ ಓಟು ಹಾಕಿ ಬರುತ್ತಿದ್ದರು. ಇಷ್ಟವಿಲ್ಲದಿದ್ದರೂ ಕರಿಯನುಮಪ್ಪನನ್ನು ಟೈರುಗಾಡಿಯಲ್ಲಿ ಬಲವಂತದಿಂದ ಕೂರಿಸಿಕೊಂಡು ಹೋಗಿದ್ದರು. ಬಿಸಿಲು ಜಾಸ್ತಿಯಿದ್ದರಿಂದ ಕರಿಯನುಮಪ್ಪನಿಗೆ ನವೆ ಜಾಸ್ತಿಯಾಗಿತ್ತು. ಕೆರೆದುಕೊಳ್ಳುತ್ತಲೇ ಕರಿಯನುಮಪ್ಪ ನಡುಗುವ ಕೈಯ್ಯಿಂದ ಓಟು ಒತ್ತಿದ್ದನು. ಮತ್ತೆ ಟೈರು ಗಾಡಿಯಲ್ಲಿ ಮನೆಯ ಹತ್ತಿರ ಬಿಟ್ಟು ಹೋಗಿದ್ದರು. ಕುಡಿದು ಟೈಟಾಗಿ ನಾಲ್ಕು ಜನ ರಸ್ತೆಯಲ್ಲೆ ಉರುಳಿಕೊಂಡಿದ್ದರು. ಮತ್ತೆ ಕೆಲವರು ವಾಲಾಡುತ್ತಾ ನಡೆಯುತ್ತಿದ್ದರು. ಕರಿಯನುಮಪ್ಪನ ಕಣ್ಣಲ್ಲಿ ನೀರು ಕಾಣಿಸಿಕೊಂಡಿತ್ತಲ್ಲದೆ ಹೊಟ್ಟೆಯಲ್ಲಿ ಸಂಕಟ ಶುರುವಾಗಿತ್ತು. ಸೊಸೆ ತಂದಿಟ್ಟ ಮುದ್ದೆ ಸಾರನ್ನು ಬಲವಂತದಿಂದೆಂಬಂತೆ ತಿಂದು ಮುಗಿಸಿದ. ಕಜ್ಜಿ ವಿಪರೀತವಾದಂತೆ ಅನ್ನಿಸತೊಡಗಿ ಪುರುಸೊತ್ತಿಲ್ಲದೆ ಕೆರೆದುಕೊಳ್ಳತೊಡಗಿದ. ಸ್ನಾನ ಮಾಡಬೇಕೆನಿಸಿತು. ಸೊಸೆ ನೀರಿಗಾಗಿ ಪಡುತ್ತಿದ್ದ ಪಡಿಪಾಟಲಿನಿಂದಾಗಿ ಆಕೆಯ ಹತ್ತಿರ ಹೇಳಿಕೊಳ್ಳಲಿಲ್ಲ.

ಐದೂವರೆ ಗಂಟೆಗೆಲ್ಲ ಊರಿನಲ್ಲಿ ಓಟು ಹಾಕುವುದು ಮುಕ್ತಾಯವಾಗಿತ್ತು. ಮಗ ಎಮ್ಕೆಗಾಂಧಿಯು ನಾಳೆ ನಡೆಯುವ ಮತ ಎಣಿಕೆಗಾಗಿ ಯಾರದೋ ಕಾರಿನಲ್ಲಿ ಜಿಲ್ಲಾ ಕೇಂದ್ರಕ್ಕೆ ಹೋಗಲು ಹೊರಟು ನಿಂತಿದ್ದ. ಸೊಸೆ ಅಡ್ಡಗಾಲು ಹಾಕಿದ್ದಳು. 'ನೀನ್ಯಾತ್ರೆಂಗ್ನಾದೋ ತೆಗಿ ಅತ್ತ. ಎಲ್ಲದ್ದಕ್ಕೂ ಅಡ್ಡ ಬರ್ತೀಯ. ನಮ್ಮ ಕ್ಯಾಂಡಿಡೇಟು ಗೆದ್ರೆ ಮುಂದೆ ಜಿಲ್ಲಾ ಪರಿಷತ್ ಎಲೆಕ್ಷನ್‌ಗೆ ಸೀಟು ಕೊಡ್ತೀನಿ ಅಂತ ಹೇಳೆವ್ರೆ ನಂಗೆ. ಈ ಸೀಮೆ ಸ್ವಾತಂತ್ರ್ಯ ಹೋರಾಟಗಾರನ ಮಗನಾಗಿ ಆ ಮಟ್ಟುಕ್ಕಾದ್ರೂ ಹೋಗ್ದಿದ್ರೆ ಯಂಗೆ. ಇಷ್ಟಕ್ಕೂ ನಾನೇನು ಅಲ್ಲೆ ಸಂಸಾರ ಹೂಡ್ಕಂಡು ಕುಂತ್ಕಂಬ್ತಿನೇನು. ನಾಳೆ ರಾತ್ರಿ ಊಟಕ್ಕೆ ಊರ್ಗೆ ಬಂದ್ ಬಿಡ್ತೀನಿ. ಕಜ್ಜಿಗೆ ಎಂಥ